

ವಿಶಿಷ್ಟ ಕಣ್ಣಿನ ಫೋಟೊಗ್ರಫರ್ ಆದಿತ್ಯ ಕ್ಷೀರಸಾಗರ್ ಸಂದರ್ಶನ

# ‘ಪ್ರಕೃತಿಯೇ ನನಗೆ ಮಾಡೆಲ್…





**ಮಹಾರಾಷ್ಟ್ರದ ಮರೈನ್ ಎಂಜಿನಿಯರ್ ಆದಿತ್ಯ ಕ್ಷೀರಸಾಗರ್ ಅವರಿಗೆ, ವನ್ಯಜೀವಿ ಸಂರಕ್ಷಣೆಗೆ ಇರುವ ಹಲವು ದಾರಿಗಳಲ್ಲಿ ‘ಛಾಯಾಗ್ರಹಣ’ವೂ ಒಂದು. ಕ್ಯಾಮೆರಾ ಮೂಲಕ ವನ್ಯಲೋಕವನ್ನು ಭಿನ್ನವಾಗಿ ಪ್ರಸ್ತುತಪಡಿಸುವ ಹಂಬಲ ಅವರದ್ದು. ಪ್ರತಿಷ್ಠಿತ ‘ಕಾಮಿಡಿ ವೈಲ್ಡ್‌ಲೈಫ್ ಫೋಟೊಗ್ರಫಿ ಅವಾರ್ಡ್ 2021’ರ ಅಂತಿಮ ಸುತ್ತಿಗೆ ಅವರ ಎರಡು ಛಾಯಾಚಿತ್ರಗಳು ಆಯ್ಕೆಯಾಗಿದ್ದವು.**

■ ಸುಮಲತಾ ಎನ್.

‘ನನ್ನಿಡೀ ಬಾಲ್ಯ ಬಣ್ಣ ಬಣ್ಣದ ಚಿಟ್ಟೆಗಳು, ಮಿಣುಕೀಟಗಳು, ಹಿತ್ತಲಿನಲ್ಲಿ ಚಿಲಿಪಿಲಿಗುಟ್ಟುತ್ತಿದ್ದ ತರಹೇವಾರಿ ಹಕ್ಕಿಗಳ ಜೊತೆಜೊತೆಗೇ ಕಳೆಯಿತು. ಅವುಗಳ ಒಡನಾಟದೊಂದಿಗೆ ಬೆಳೆದಿದ್ದರಿಂದ ಪ್ರಾಣಿ–ಪಕ್ಷಿಗಳನ್ನು ಕಂಡರೆ ಪ್ರೀತಿ–ಕೌತುಕ. ಆ ಕೌತುಕವೇ ನನ್ನನ್ನು ಕ್ಯಾಮೆರಾ ಹಿಡಿಯಲು ಪ್ರೇರೇಪಿಸಿದ್ದು…’

ವನ್ಯಜೀವಿ ಫೋಟೊಗ್ರಫಿ ಕುರಿತ ತಮ್ಮ ಆಸಕ್ತಿಯ ಮೂಲವನ್ನು ಆದಿತ್ಯ ಕ್ಷೀರಸಾಗರ್ ವಿವರಿಸುವುದು ಹೀಗೆ.

ಮಹಾರಾಷ್ಟ್ರದ ಸೊಲ್ಲಾಪುರ ಮೂಲದ ಆದಿತ್ಯ ಕ್ಷೀರಸಾಗರ್, ವೃತ್ತಿಯಲ್ಲಿ ಮರೈನ್ ಎಂಜಿನಿಯರ್. ಮೆಕ್ಯಾನಿಕಲ್ ಎಂಜಿನಿಯರಿಂಗ್ ಮಾಡಿ, ‘ಮರೈನ್ ಎಂಜಿನಿಯರಿಂಗ್’ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು, ಹತ್ತು ವರ್ಷಗಳಿಂದ ‘ಗಿಯರ್‌ಬಲ್ಕ್ ನಾರ್ವೇ ಅಂತರರಾಷ್ಟ್ರೀಯ ಹಡಗು ಕಂಪನಿ’ಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಸದ್ಯ ಪುಣೆಯಲ್ಲಿ ವಾಸ. ವನ್ಯಜೀವಿ ಛಾಯಾಗ್ರಹಣ ನೆಚ್ಚಿನ ಹವ್ಯಾಸ.

ಕೆಲಸದ ಕಾರಣ ಕಡಲ ಮೇಲೆಯೇ ನಾಲ್ಕೈದು ತಿಂಗಳು ಕಳೆಯುವ ಆದಿತ್ಯ ಅವರಿಗೆ ರಜೆ ಸಮಯದಲ್ಲಿ ಜೊತೆಯಾಗುವುದು ಕ್ಯಾಮೆರಾ. ಕೆಲಸದಿಂದ ಮರಳುತ್ತಿದ್ದಂತೆ ಕ್ಯಾಮೆರಾ ಹಿಡಿದು ಕಾಡುಗಳ ಅಲೆದಾಟ ಶುರು.

ಪುಟ್ಟ ಉದ್ದೇಶದ ಮಾಧ್ಯಮವಾಗಿ ಆದಿತ್ಯ ಅವರು ಛಾಯಾಗ್ರಹಣವನ್ನು ಆರಿಸಿಕೊಂಡಿದ್ದು. ‘ಸೊಲ್ಲಾಪುರ ಜಿಲ್ಲೆಯ ಬಹುಪಾಲು ಭೂಮಿ ಹುಲ್ಲುಗಾವಲು. ಇಲ್ಲಿನ ಜನರು ಹುಲ್ಲುಗಾವಲು ಪ್ರದೇಶವನ್ನು ನಿಷ್ಪ್ರಯೋಜಕ ಭೂಮಿ ಹಾಗೂ ಇದು ಕೈಗಾರಿಕೆಗಳಿಗಷ್ಟೆ ಸೂಕ್ತ ಎಂದು ಭಾವಿಸುತ್ತಾರೆ. ಆದರೆ ಈ ಹುಲ್ಲುಗಾವಲಿನಲ್ಲಿ ಅದ್ಭುತ ಸೌಂದರ್ಯವಿದೆ. ಇಲ್ಲಿನ ಸೌಂದರ್ಯವನ್ನು, ಜೀವಸಂಕುಲವನ್ನು ಜನರಿಗೆ ಪರಿಚಯಿಸಲು ಹಾಗೂ ಈ ಕುರಿತು ಜಾಗೃತಿ